# ರೈಲು ಕಟ್ಟಡದೊಳಗೊ..



ನೆಲದ ಆಳದಲ್ಲಿ ರೈಲು ಮಾರ್ಗ ನೋಡಿದ್ದೀರಿ, ಸುರಂಗ ಮಾರ್ಗ ಸಾಮಾನ್ಯವೇ. ಆದರೆ ಕಟ್ಟಡದ ಒಳಗೇ ರೈಲುಮಾರ್ಗ ನಿರ್ಮಿಸಿ ಅಲ್ಲಿ ದಿನನಿತ್ಯ ರೈಲು ಸಂಚರಿಸುವುದನ್ನು ನೋಡಿದ್ದೀರಾ ಅಥವಾ ಕೇಳಿದ್ದೀರಾ?

ಚೀನಾದ ಚಾಂಕ್ವಿಂಗ್ ಪ್ರದೇಶಕ್ಕೆ ನೀವು ಹೋದರೆ ಅಲ್ಲಿ ಮೆಟ್ರೋ ರೈಲೊಂದು 19 ಅಂತಸ್ತುಗಳ ಕಟ್ಟಡವೊಂದರೊಳಗೆ ಹೋಗಿ ಮತ್ತೊಂದು ಬದಿಯಿಂದ ಹೊರ ಬರುವುದನ್ನು ಕಾಣಬಹುದು. ಅಲ್ಲಿನ ರೈಲು ಮಾರ್ಗವೇ ಕಟ್ಟಡದ ಒಳಗಿಂದಾಗಿ ಹಾದು ಹೋಗಿದ್ದು, ಜಗತ್ತಿನ ಬೇರೆಲ್ಲೂ ಇಂತಹ ಚಿತ್ರಣ ಕಾಣಸಿಗದು.

ಅಲ್ಲಿನ ಆಡಳಿತವು ಮೋನೊ ರೈಲು ಮಾರ್ಗ ನಿರ್ಮಿಸಲು ಯೋಜಿಸಿದಾಗ ಕಾಡಿದ್ದು ಜಾಗದ ಸಮಸ್ಯೆ. ರೈಲು ಹಳಿ ಹಾದುಹೋಗಲು ಜಾಗವೇ ಇಲ್ಲದಂತಹ ಪರಿಸ್ಥಿತಿ. ಅಪಾರ ಜನಸಂಖ್ಯೆ ಹೊಂದಿರುವ ಆ ನಗರದಲ್ಲಿ ಎಲ್ಲೆಂದರಲ್ಲಿ ಬರೀ ಕಟ್ಟಡಗಳೇ. ಅದಕ್ಕಾಗಿ ರೈಲ್ವೇ ಎಂಜಿನಿಯರ್‌ಗಳು ಹೊಸದಾದ ಯೋಜನೆಯೊಂದನ್ನು ರೂಪಿಸಿದರು. ಅದರಂತೆ ದೊಡ್ಡದಾದ ಕಟ್ಟಡವೊಂದರ ಒಳಗಿನಿಂದಲೇ ರೈಲು ಮಾರ್ಗ ನಿರ್ಮಿಸಿದರು. ಇದೀಗ ರೈಲು 19 ಅಂತಸ್ತುಗಳ ಕಟ್ಟಡವೊಂದರ ಒಂದು ಬದಿಯಿಂದ ಒಳ ನುಗ್ಗುತ್ತದೆ, ಮತ್ತೊಂದು ಬದಿಯಿಂದ ಹೊರಬರುತ್ತದೆ. ರೈಲು ಮಾರ್ಗವು ಈ ಕಟ್ಟಡದ ಆರು ಮತ್ತು ಎಂಟನೆ ಅಂತಸ್ತಿನಲ್ಲಿ ಹಾದು ಹೋಗುತ್ತದೆ.

ಕಟ್ಟಡದ ಫ್ಲ್ಯಾಟುಗಳಲ್ಲಿರುವ ನಿವಾಸಿಗಳಿಗಂತೂ ತಮ್ಮ ಕಟ್ಟಡದಲ್ಲೇ ರೈಲೇರುವ ಅವಕಾಶ. ಕಟ್ಟಡದೊಳಗೆ ರೈಲು ನಿಲುಗಡೆಗೆ ಕೂಡ ಅವಕಾಶ ಕಲ್ಪಿಸಲಾಗಿದೆ. ರೈಲು ಕಟ್ಟಡದೊಳಗಿಂದ ಹಾದು ಹೋಗುವಾಗ ಹೆಚ್ಚಿನ ಸದ್ದು ಕೂಡ ಮಾಡದಂತೆಯೂ ವ್ಯವಸ್ಥೆ ಮಾಡಲಾಗಿದೆ. ಹಾಗಾಗಿ ಅಲ್ಲಿನ ನಿವಾಸಿಗಳಿಗೇನೂ ತೊಂದರೆಯಾಗಿಲ್ಲ. ಅಭಿವೃದ್ಧಿ, ತಂತ್ರಜ್ಞಾನ ಎಂದರೆ ಇದೇ ತಾನೆ?

■ ಗಾಯತ್ರಿ ನಾಯಕ್ ಮಂಗಳೂರು

